ಇಳಿಬಿದ್ದಿದ್ದ ಅವನ ಮುಖವನ್ನೂ ನೋಡಿದರೆ ಸಿನಿಮಾ ನಟಿಯ ಆತ್ಮಹತ್ಯೆಯ ಪ್ರಯತ್ನದ ಕತೆಯಿರಲಿ, ಬೇರಾವ ವಿಷಯದ ಬಗೆಗೂ ಒಂದು ಸಣ್ಣ ಸೊಲ್ಲು ಕೂಡ ಅವನ ಬಾಯಿಂದ ಹೊರಬೀಳುವಂತೆ ಕಾಣುತ್ತಿರಲಿಲ್ಲ.

'ಏಳು ಗಂಟೆ ಮಾರ್ನಿಂಗ್ ನ್ಯೂಸ್ಗೇ ಲೈವ್ ಬಂದುಬಿಡು' ಎಂದು ಬಾಸ್ ಪುಸಲಾಯಿಸಿದ್ದ. ಕೆಲವು ತಿಂಗಳ ಮೊದಲಾದರೆ, ಮಲ್ಲಿಕಾ ಇಂಥ ಘಟನೆಗಳ ಸ್ಪಾಟಿಗೆ ಹೋಗುವ ಮೊದಲೇ ರಿಪೋರ್ಟಿಂಗಿನಲ್ಲಿ ಬಳಸಬಹುದಾದ ವಾಕ್ಯಗಳು ಭರ್ರನೆ ನುಗ್ಗಿ ಬರುತ್ತಿದ್ದವು:

ಈ ಅವಘಡ ಆಕಸ್ಮಿಕವೋ? ಉದ್ದೇಶಪೂರ್ವಕವೋ?

ಪೊಲೀಸರು ತುಟಿಕ್ ಪಿಟಿಕ್ ಅನ್ನದೇ ಇರೋದನ್ನ ನೋಡಿದರೆ... ಪ್ರಕರಣ ನಿಗೂಢವಾಗಿರೋದು ಸ್ಪಷ್ಟವಾಗಿದೆ!

ಆತ್ಮಹತ್ಯೆಯ ಪ್ರಯತ್ನದ ಹಿಂದೆ ಕಾಣದ ಕೈಗಳು ಕೆಲಸ ಮಾಡ್ತಾ ಇರೋದು ಎದ್ದು ಕಾಣ್ತಾ ಇದೆ!

ಇದು ಆತ್ಮಹತ್ಯೆಯ ಯತ್ನವೋ? ಹತ್ಯೆಯ ಯತ್ನವೋ? ಭಗ್ನ ಪ್ರೇಮವೋ?

ಇದು ಪಾಪ್ಯುಲರ್ ನಟ–ನಟಿಯರ ನಡುವಣ ತೆರೆಮರೆಯ ಜಿದ್ದಾಜಿದ್ದಿಯ ಫಲವೇ?

ಪ್ರಕರಣದ ಹಿಂದೆ ಇರೋದೇನು? ಝಣ ಝಣ ರೂಪಾಯಿ ನಂಟೇ? ಪಾಪ್ಯುಲಾರಿಟಿ ಸ್ಟಂಟೇ?

...ಹೀಗೆ ವಾಕ್ಯಗಳು ಅದೆಲ್ಲಿಂದ ಹುಟ್ಟಿ ಬರುತ್ತಿದ್ದವೋ ಕಾಣೆ... ಮಲ್ಲಿಕಾ ಘಟನೆಯ ಸ್ಥಳದಲ್ಲಿ ನಿಂತರೆ ಸಾಕು, ಅವು ಪಟಪಟನೆ ಅವಳ ಬಾಯಿಂದ ಹೊರಜಿಗಿಯುತ್ತಿದ್ದವು! ಜಿಗಿದಷ್ಟೇ ವೇಗವಾಗಿ ಕಿರುತೆರೆಯ ಮೇಲೆ ಮೂಡುತ್ತಿದ್ದವು... ಅಷ್ಟೇ ವೇಗವಾಗಿ ಅಳಿಸಿಹೋಗುತ್ತಿದ್ದವು; ಮತ್ತೆ ಪ್ರತ್ಯಕ್ಷವಾಗುತ್ತಿದ್ದವು... ಇನ್ನೊಂದು ಇಂಥದೇ ರೋಚಕ ಸ್ಟೋರಿ ಈ ಸ್ಟೋರಿಯ ಜಾಗ ತುಂಬುವ ತನಕ ಇಂಥ ವಾಕ್ಯಗಳು ಅವಳ ಬಾಯಿಂದ ಹರಿದು ಬರುತ್ತಲೇ ಇದ್ದವು...

ಇವತ್ತು ಹಾಗಾಗಲಿಲ್ಲ. ಯಾಕೆ ಹಾಗಾಗಲಿಲ್ಲ ಎನ್ನುವುದು ಮಲ್ಲಿಕಾಗೂ ಗೊತ್ತಿತ್ತು. ಸೆಲೆಬ್ರಿಟಿಯಾದರೂ ತೀರಾ ಸರಳವಾಗಿ ನಡೆದುಕೊಳ್ಳುತ್ತಾ, ಪರಿಚಯವಾದ ದಿನದಿಂದಲೂ ತನ್ನನ್ನು ಬಹುಕಾಲದ ಗೆಳತಿಯಂತೆ ಕಾಣುತ್ತಿದ್ದ ರಂಜಿತಾ ಸೇನ್ ಬಗ್ಗೆ ಮಲ್ಲಿಕಾ ನಾಲಗೆ ಎತ್ತೆಂದರತ್ತ ಹೊರಳುವುದು ಸಾಧ್ಯವಿರಲಿಲ್ಲ; ಜೊತೆಗೆ, ರಂಜಿತಾ ಇದೀಗ ಇಟ್ಟಿದ್ದ ಹೆಜ್ಜೆಯನ್ನು ಮೊನ್ನೆ ಸ್ವತಃ ತಾನೇ ಇಡಲು ಯೋಚಿಸಿದ್ದು ಕೂಡ ಒಳಗೊಳಗೇ ಮಲ್ಲಿಕಾಳನ್ನು ಚುಚ್ಚುತ್ತಿತ್ತು! ಆದರೂ... ಮಲ್ಲಿಕಾ ಇಡಬಯಸಿದ್ದ ಹೆಜ್ಜೆ ರಂಜಿತಾಳ ಹೆಜ್ಜೆಯಷ್ಟು ಭಯಾನಕವಾಗಿರಲಿಲ್ಲ: ಥಣ್ಣಗೆ, ಮೌನವಾಗಿ, ಗಾಳಿಯಲ್ಲಿ ಸುಮ್ಮನೆ ಹಾರಿ ಹಾರಿ ಸರಿದು ಹೋಗುವ ಎಲೆಯ ಹಾಗೆ ಕಣ್ಮರೆಯಾಗಬೇಕು ಎಂದು ಈಚೆಗೆ ಒಂದು ರಾತ್ರಿ ಇದ್ದಕ್ಕಿದ್ದಂತೆ ಮಲ್ಲಿಕಾಗೆ ಅನ್ನಿಸಿತ್ತು.

ಆ ರಾತ್ರಿಯ ಅಸಂಗತ ಬಯಕೆ ಈ ರಾತ್ರಿ ನೆನಪಾಗಿ ಮಲ್ಲಿಕಾಗೆ ಒಂದು ವಿಚಿತ್ರ ಕುತೂಹಲ ಹುಟ್ಟಿತು: ಅಕಸ್ಮಾತ್ ನಾನೇ ಈ ಹೆಜ್ಜೆಯಿಟ್ಟಿದ್ದರೆ, ನನ್ನ ಸ್ಟೋರಿ ಕವರ್ ಮಾಡಲು ಅಸೈನ್‌ಮೆಂಟ್ ಪಡೆಯುತ್ತಿದ್ದ ಇದೇ ಚಾನಲ್ಲಿನ ಸುಜಾತಾಮೂರ್ತಿ ಯಾವ ಥರದ ಮಾತುಗಳನ್ನು ನನ್ನ ಬಗ್ಗೆ ಬಳಸುತ್ತಿದ್ದಳೋ? ವೃತ್ತಿಗೆ ಹೊಸಬಳಾದ ಅವಳ ಬಾಯಿಗೆ ಯಾವ ಥರದ ಮಾತುಗಳನ್ನು ಕಂಟೆಂಟ್ ರೈಟರ್ ಕಮಲ್ ರಾವ್ ಬರೆಯುತ್ತಿದ್ದನೋ... ಅಥವಾ ನನ್ನ ಈ ನಡೆಯಿಂದ ಚಾನಲ್ಲಿನಲ್ಲಿ ಕೆಲಸ ಮಾಡುವ ಎಲ್ಲರಿಗೂ ನಿಜಕ್ಕೂ ದಿಗ್ಭ್ರಮೆಯಾಗಿ ಈ ಸ್ಟೋರಿಯನ್ನೇ ಮುಟ್ಟದೆ ಹಿಂಜರಿಯುತ್ತಿದ್ದರೋ? ಛೇ! ನನ್ನ ಬಗ್ಗೆ ಅವರು ಯಾವ ರೀತಿ ಸ್ಟೋರಿ ಮಾಡುತ್ತಾರೆ ಎಂಬುದನ್ನು ನೋಡುವುದಕ್ಕಾಗಿಯಾದರೂ ಒಂದು ಸಲ ಸೂಯಿಸೈಡ್ ಅಟೆಂಪ್ಟ್ ಮಾಡಬೇಕಾಗಿತ್ತು! ಜೊತೆಗೆ... ರಮೇಶನಿಗೂ ಪಾಠ ಕಲಿಸಿದಂತಾಗುತ್ತಿತ್ತು... ಅದಿರಲಿ, ಅವನು ಯಾವ 'ಪಾಠ' ಕಲಿಯುತ್ತಿದ್ದ ಎಂಬುದನ್ನು ಹೇಗೆ ಊಹಿಸುವುದು! ಅಥವಾ ಪೀಡೆ ತೊಲಗಿತು ಎಂದು ಅವನು